# ಶಿಕ್ಷಣದಲ್ಲಿ ಚಿತ್ರಕಲೆಯ ಮಹತ್ವ

ಚಿತ್ರಕಲೆಯು ಶೈಕ್ಷಣಿಕ ಕ್ಷೇತ್ರದಲ್ಲಿಯೆ ಸ್ಪರ್ಷಮಣಿಯ ಹಾಗೆ. ತಿಳಿಯಲೆತ್ನಿಸುವವರ, ಅರ್ಥೈಸುವವರ, ಅಭಿವ್ಯಕ್ತಿಸುವವರ ಮೌಲ್ಯವನ್ನು, ಕೌಶಲ್ಯವನ್ನು, ಪ್ರತಿಭೆಯನ್ನು ಅವಲಂಭಿಸಿ ಚಿತ್ರಕಲೆಯೆಂಬುದು ಮೂರ್ತ ರೂಪಥಲ್ಲಿ ಗೋಚರಿಸುತ್ತದೆ, ಬೆಳಕಾಗುತ್ತದೆ. ಕಲೆಯೆಂಬುದು ಸೀಮಿತ ಚೌಕಟ್ಟಿನಲ್ಲಿ ನೋಡ ಹೊರಟರೆ ತೀರ ಚಿಕ್ಕದೆನಿಸಿ ಅರ್ಥವ್ಯಾಪ್ತಿಯು ಮೌಲ್ಯರಹಿತವಾಗುತ್ತದೆ. ಬೆಲ್ಲ, ಸಕ್ಕರೆ, ಕಲ್ಲುಸಕ್ಕರೆ, ಜೇನು ಈ ಎಲ್ಲವೂ ಸವಿದಾಗ ಸವಿಯೆಂಬುದನು ಹೇಳುತ್ತಾರೆ. ಆದರೆ ತಿಂದ ನಾಲಗೆಯು ಸವಿದ ಈ ಸವಿಯ ಸ್ವಾದವನ್ನು ಪದಗಳಿಂದ ಅರ್ಥೈಸಲು ಹೇಗೆ ಅಸಾಧ್ಯವೋ ಹಾಗೆಯೇ ಚಿತ್ರಕಲೆಯೆಂಬುದು ಸಹ.

ಚಿತ್ರಕಲೆಯನ್ನು ಅಧ್ಯಯನ ಮಾಡುವುದು, ಆ ಅನುಭವವನ್ನು ಸವಿಯುವುದು. ಸುಲಭ ಸಾಧ್ಯವಾದ ಮನೋಧರ್ಮದವರಿಗೆ ಈ ವಿಷಯವನ್ನು ಅರ್ಥೈಸುವುದು ಆಗಲಾರದ ವಿಷಯ. ಅದೊಂದು ಭಾವನಾತ್ಮಕ ಪ್ರಪಂಚ, ಅದರ ಒಳನೋಟವನ್ನು ಅರಿಯಲು ಚಿತ್ರಕಲೆಯೆಂಬ ಆ ಮಧುರ ಸವಿಯನ್ನು ಸವಿಯಲು ಅಧ್ಯಯನವು ಅವಶ್ಯವಾಗಿ ಬೇಕಾಗುತ್ತದೆ. ಸಂಸ್ಕಾರ, ಸಂಸ್ಕೃತಿಯ ಉನ್ನತಿಯಲ್ಲಿ ಕಲೆಯು ಕಾರ್ಯ ನಿರ್ವಹಿಸಿರುತ್ತದೆ ಎಂಬುದು ಜನಜನಿತವಾದ ಮಾತು.

ಮನುಷ್ಯ ಹುಟ್ಟಿದಾಗಲೆ ಗುಹಾಂತರಗಳಲ್ಲಿ ಚಿತ್ರ ರಚಿಸುತ್ತಾ ಆನಂದವಾಗಿ ಬದುಕಿದ್ದನ್ನು ನಾವು ಇತಿಹಾಸದಲ್ಲಿ ಓದಿ ತಿಳಿದಿದ್ದೇವೆ. ಆಗಿನ ಚಿತ್ರಕಲೆಯ ಅಧ್ಯಯನದ ಆಧಾರದ ಮೇಲೆ ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಸ್ಥಿತಿಗತಿಗಳನ್ನು ತಿಳಿದಿದ್ದೇವೆ. ಆಗಿನಿಂದ ಪ್ರಾರಂಭವಾಗುವ ಚಿತ್ರ ರಚನೆಯು ಎಲ್ಲಿಯೂ ನಿಂತ ನೀರಾಗಿಲ್ಲ ಎಂಬುದು ಸಹ ಅಷ್ಟೇ ಸತ್ಯ. ಚಿತ್ರ ಭಾಷೆಯಾಗಿ ಕಾರ್ಯ ನಿರ್ವಹಿಸುತ್ತಾ ಬಂದುದು...... ಮಗುವೊಂದು ಹುಟ್ಟಿದ ನಂತರ ತೊದಲು ಮಾತನ್ನು ಆಡಲು ಪ್ರಾರಂಭಿಸುವ ಮುನ್ನ ತನ್ನ ಕೈಗೆಟುಕುವ ಪರಿಕರಗಳಿಂದ ಗೀಚತೊಡಗುತ್ತದೆ. ಎಂತದೋ ಆಕಾರಗಳ ಬರೆಯುವ ಮಕ್ಕಳು, ಎಲ್ಲಾ ಭಾಷೆಯ ಎಲ್ಲಾ ಜನಾಂಗದಲ್ಲೂ ಸಿಗುತ್ತಾರೆ. ಮುದವನ್ನು ಪಡೆಯುತ್ತದೆ. ಅಂತಹದೇ ಸಂದರ್ಭದಿಂದ ಪ್ರಾರಂಭವಾಗುವ ಮಗುವಿನ ಮನದ ವಿಕಾಸಕ್ಕೆ ಚಿತ್ರ, ಮೊದಲ ಮೆಟ್ಟಿಲು ಎಂಬುದು ಸತ್ಯವಾದ ವಿಷಯ.

ಒಂದು ಮಗುವಿನ ಮೆದುಳಿನಲ್ಲಿ ಚಿತ್ರ (ಆಕೃತಿ)ಗಳನ್ನು ಗ್ರಹಿಸಲು ಇರುವ ಸ್ಥಳಾವಕಾಶ ಹೆಚ್ಚು ಎಂಬುದನ್ನು ತಜ್ಞರು ಅಧ್ಯಯನದಿಂದ ದೃಢೀಕರಿಸಿದ್ದಾರೆ. ಚಿತ್ರದ ಮೂಲಕ ಬೋಧಿಸಲ್ಪಡುವ ಪಾಠಗಳು ಹೆಚ್ಚು ಆಕರ್ಷಕ, ಹೆಚ್ಚು ಪರಿಣಾಮಕಾರಿಯಾಗಿ... ಸರಳವಾಗಿ ಅರ್ಥವಾಗುವುದರ ಜೊತೆಗೆ ಕಡಿಮೆ ಅವಧಿಯಲ್ಲಿ ಹೆಚ್ಚು ವಿಚಾರಗಳನ್ನು ತಿಳಿಸಬಹುದು ಮತ್ತು ಕಲಿಯಬಹುದು ಎಂಬುದು ಗಮನಾರ್ಹ.

ಚಿತ್ರಕಲೆಯು ಸೀಮಿತ ಆಯಾಮವನ್ನು ಹೊಂದಿರದೆ ವೈಶಿಷ್ಟ್ಯಪೂರ್ಣವಾಗಿ ಹಾಗೂ ವಿಶಾಲ ಒಳನೆಲೆಯ ದೃಷ್ಟಿಕೋನವನ್ನು ಹೊಂದಿದೆ ಎಂಬುದು ಹೆಚ್ಚು ಸ್ಪಷ್ಟ. ಚಿತ್ರಕಲೆಯು ಪಠ್ಯ ವಿಷಯಗಳಿಗೆ ಪೂರಕವಾಗಿ ಬಳಸುವ ಸಾಮರ್ಥ್ಯ ಕೂಡ ಇತರ ಶಿಕ್ಷಕರಿಗೂ ಬೇಕಾಗುತ್ತದೆ ಮತ್ತು ಬೆಳೆಸಿಕೊಳ್ಳ ಬೇಕಾಗುತ್ತದೆ.

- ವಿಷಯ ತಿಳಿಸುವ ಸೂಚನಾ ಫಲಕಗಳು
- ಗೋಡೆಯ ಮೇಲಿನ ನುಡಿಮುತ್ತುಗಳು (ಉಕ್ತಿಗಳು)
- ಪ್ರಾಣಿ, ಪಕ್ಷಿಚಿತ್ರಗಳು
- ಬಣ್ಣಗಳ ಬಗ್ಗೆ ತಿಳಿಸುವ ಚಾರ್ಟ್‌ಗಳು
- ಬೋಧನೆಗೆ ಉಪಯೋಗಿಸಲ್ಪಡುವ ಫ್ಲಾಶ್‌ಕಾರ್ಡ್‌ಗಳು
- ಆಟದ ಜೊತೆ ಕಲಿಸಲು ಉಪಯೋಗಿಸುವ ಮುಖವಾಡಗಳು
- ಕಥೆ ಹೇಳಲು, ಕವಿತೆಗೆ ಪೂರಕವಾಗಲು, ಉಪಯೋಗಿಸುವ ಚಿತ್ರಗಳು
- ಅಲಂಕಾರಕ್ಕಾಗಿ ತಯಾರಿಸಲ್ಪಡುವ ವಿನ್ಯಾಸದ ಚಿತ್ರ ಮಾದರಿಗಳು (ರಂಗೋಲಿ, ಪೇಪರ್‌ ಕಟಿಂಗ್ ಇತ್ಯಾದಿ)
- ಕಪ್ಪು ಹಲಗೆಯಲ್ಲಿ ಬರೆಯುವಂತ ಸರಳ ರೇಖಾಚಿತ್ರ, ಸಮಯೋಚಿತ ಚಿತ್ರಗಳು ಮುಂತಾದವುಗಳು.

ಈ ಮೇಲಿನ ಉಪಯೋಗಗಳಿಂದ ಉತ್ತಮ ಗುಣಮಟ್ಟದ ಪರಿಸರವೊಂದು ಶಾಲೆಯಲ್ಲಿ ಚಿತ್ರಕಲೆಯಿಂದಲೇ ನಿರ್ಮಾಣವಾಗುತ್ತದೆ ಎಂಬುದು ಗಮನಾರ್ಹ ವಿಷಯವೇ ಆಗಿದೆ. ಮಗುವಿನ ಆನಂದದಾಯಿಕ ಕಲಿಕೆಗೆ ಚಿತ್ರಕಲೆಯ ಬಗ್ಗೆ ಪ್ರೀತಿ, ಮೆಚ್ಚುಗೆ, ಉನ್ನತಿಯ ಚಿಂತನೆ ಮಾಡುವುದು. ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಚಿತ್ರಕಲೆಯು ಅತೀ ಮಹತ್ತರ ಪಾತ್ರ ವಹಿಸುತ್ತದೆ. ಸುಂದರ ವಾತಾವರಣದಿಂದ ಅತ್ಯುತ್ತಮವಾದ ಗುರಿ ಮುಟ್ಟುವ ಭರವಸೆ ಮೂಡುತ್ತದೆ.

ಮಗುವೊಂದರ ಭವಿಷ್ಯವನ್ನು ರೂಪಿಸುವಲ್ಲಿ, ಇಂದಿನ ತಂತ್ರಜ್ಞಾನದ ಜೊತೆ ಮುನ್ನಡೆವ ಯುಗದ ಆರಂಭದ ಹೊಸ್ತಿಲಲ್ಲಿ ಚಿತ್ರದ ಪಾತ್ರ ಮಹತ್ತರವಾದುದು. ಗ್ರಾಫಿಕ್ ಡಿಸೈನ್, ಸಾಫ್ಟ್‌ವೇರ್, (ತಂತ್ರಾಂಶ) ಮಲ್ಟಿಮೀಡಿಯಾ (ಬಹುಮಾಧ್ಯಮ), ಪ್ರಯೋಗಾತ್ಮಕ, ಕಲ್ಪನಾತ್ಮಕ ರಚನೆ ಕೌಶಲ್ಯದಿಂದ ಕಲೆಯ ಪಾತ್ರ ಹಿರಿಯದಾಗಿ ನಿಲ್ಲುತ್ತಿರುವುದು. ಉತ್ತಮ ಪ್ರಯತ್ನ ಅತ್ಯುತ್ತಮ ಫಲಿತಾಂಶವನ್ನು ನೀಡಬಲ್ಲದು.

ಶೈಕ್ಷಣಿಕ ಕ್ಷೇತ್ರದಲ್ಲಿ ಚಿತ್ರವನ್ನು ಬಳಸಿಕೊಂಡು ಅತ್ಯಂತ ಆಶಾದಾಯಕ ಬೋಧನೆಯಿಂದ ಮಹತ್ವಪೂರ್ಣ ಬದಲಾವಣೆಯ ಹೊಸ ಆವಿಷ್ಕಾರವನ್ನು ಮಾಡಲು ಸಾಧ್ಯವಿದೆ ಎಂಬುದು ಶಿಕ್ಷಕರಿಗೆ ಮನದಟ್ಟಾಗಬೇಕಿದೆ.

ಪಠ್ಯ ವಿಷಯವನ್ನು ಬೋಧಿಸುವಾಗ ರೇಖಾಚಿತ್ರ, ಬಣ್ಣ ತುಂಬಿದ ಚಿತ್ರ, ಕಪ್ಪು ಹಲಗೆಯ ಮೇಲೆ ಬರೆದ ಸಮಯೋಚಿತ ರೇಖಾ ಚಿತ್ರ ಬರೆಯುತ್ತ, ವಿಷಯ ಪ್ರಸ್ತಾಪಿಸುತ್ತಾ, ಚಿತ್ರ ರಚಿಸಿದರೆ ಮಕ್ಕಳೆಲ್ಲರ ಗಮನ ಕಪ್ಪು ಹಲಗೆಯ ಕಡೆ ಹರಿಯುವುದಲ್ಲದೆ, ಶಿಕ್ಷಕ ಬೋಧಿಸುವ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವರು, ಕಲಿಕೆಯಲ್ಲಿ ಮುನ್ನಡೆ ಕಾಣುವರು.

ಚಿತ್ರಕಲೆಯು ಯಾವುದೇ ಭಾಷೆಯ ಸೀಮಿತ ಚೌಕಟ್ಟಿಗೆ ಒಳಪಡುವುದೇ ಇಲ್ಲ. ವಿಶ್ವಭಾಷೆಯಿದ್ದ ಹಾಗೆ, ಒಟ್ಟಿನಲ್ಲಿ ಹೇಳುವುದಾದರೆ ಹೃದಯ ಭಾಷೆಯೆಂದರೂ ತಪ್ಪಾಗಲಾರದು. ಚಿತ್ರ ಒಂದೇ ಆದರೂ ಅರ್ಥೈಸುವ ಮನಗಳ ಅರ್ಥ ಬೇರೆ ಬೇರೆಯೇ ಆಗಿರುತ್ತದೆ. ಅಂತಹ ಅಮೂರ್ತತೆಯ ಸೊಗಡು ಚಿತ್ರಕ್ಕಿದೆ. ಚಿತ್ರಕಲೆ

ಕಲಿಯಲು ತೊಡಗಿರುವವರ ಮನದ ಸ್ಥಿತಿ, ದೃಷ್ಟಿಕೋನಗಳು ವ್ಯಾಪಕವಾದ ವೈಶಿಷ್ಟ್ಯತೆಯನ್ನು ಪಡೆದುಕೊಂಡಿರುತ್ತದೆ. ಕಲಾತ್ಮಕತೆಯ ಆ ದೃಷ್ಟಿಕೋನ, ಸೌಂದರ್ಯ ಪ್ರಜ್ಞೆ, ಕೌಶಲ್ಯ, ಸ್ಮರಣಶಕ್ತಿ ಅಭಿವೃದ್ಧಿ, ಅಭಿವ್ಯಕ್ತಿ, ಸುಂದರ ಬದುಕೊಂದರ ಹೊಂಗನಸಿನ ಭಾವ, ಚಿತ್ರಕಲೆ.


ಚಿತ್ರ ರಚನೆಗೆ ತೊಡಗುವ ಮಗುವಿನ ಮನಸ್ಸು ಹಾಗೂ ದೇಹವು ಒಂದೇ ಕಡೆಯಿದ್ದು ಏಕಾಗ್ರತೆಗೆ, ಕೌಶಲ್ಯ ವೃದ್ಧಿಗೆ, ಸ್ಮರಣಶಕ್ತಿಯ ಬೆಳವಣಿಗೆಗೆ ಪೂರಕವಾಗುವುದಲ್ಲದೆ ಹೆಚ್ಚು ಆನಂದವನ್ನು ಪಡೆಯುತ್ತದೆ. ಇಂತಹ ಸಹಜ ಕ್ರಿಯೆಯ ಚಿತ್ರರಚನೆಯಿಂದ ಖುಷಿ ಪಡುವ ಮಗು ಎಂತದೇ ಕ್ಲಿಷ್ಟಕರವಾದ ವಿಷಯವಿದ್ದರೂ, ಸಮಸ್ಯೆ ಇದ್ದರೂ ಪರಿಹಾರವನ್ನು ತಾನೇ ಕಂಡುಕೊಳ್ಳುವಲ್ಲಿ ಪ್ರಯತ್ನಿಸುತ್ತದೆ ಹಾಗೂ ಸಫಲತೆಯನ್ನು ಪಡೆಯುತ್ತದೆ.

> ಜೈಲಿನಲ್ಲಿ ಸಂಗೀತ, ಚಿತ್ರಕಲೆ ಮೊದಲಾದ ಸೃಜನಶೀಲ ಕಲೆಗಳು ಪ್ರವೇಶವಿಟ್ಟರೆ, ಇಷ್ಟು ಮುಂದೆ ಜೈಲುಗಳು ಇರಬೇಕಾದ ಅಗತ್ಯವೇ ಇರುವುದಿಲ್ಲ.
>
> **- ನಿಕೋಲಸ್ ರೋರಿಕ್**

ಚಿತ್ರಕಲೆಯನ್ನು ಅಧ್ಯಯನಕ್ಕನುಸರಿಸಿ ಹಲವಾರು ವಿಷಯಗಳನ್ನಾಗಿ ವರ್ಗೀಕರಿಸಲಾಗಿದೆ. ಅದರದೇ ನಿಯಮಗಳನ್ನು ರೂಪಿಸಲಾಗಿದೆಯಾದರೂ ಕಲಿಯುವಾತನ ಕೌಶಲ್ಯವೇರಬುದೂ ಸಹ ಸ್ಪಷ್ಟ. ಆ ಒಂದೊಂದು ವಿಷಯವನ್ನು ವಿಶೇಷ ಅನುಭವ, ಅವಕಾಶ, ನೆಲೆ, ಸೃಷ್ಟಿಯ ಮಜಲನ್ನು ತೆರೆಯುತ್ತವೆ. ರೇಖೆಗಳು, ವರ್ಣಗಳು, ಆಕಾರಗಳು, ದೃಶ್ಯಚಿತ್ರಗಳು, ಕಥಾಚಿತ್ರಗಳು, ಸ್ಮರಣಚಿತ್ರಗಳು, ವಸ್ತುಚಿತ್ರಗಳು, ಪ್ರಕೃತಿಚಿತ್ರಗಳು, ಅಕ್ಷರ ಲೇಖನಗಳು, ವಿನ್ಯಾಸಗಳು, ವ್ಯಕ್ತಿಚಿತ್ರಗಳು, ಪ್ರಾಣಿ, ಪಕ್ಷಿಗಳು, ಭಾಷೆಯಲ್ಲೂ ಅಭಿವ್ಯಕ್ತಿಸಲಾಗದ ಅಮೂರ್ತ ಭಾವಗಳು ಚಿತ್ರಗಳಾಗುತ್ತವೆ, ಆನಂದಾನುಭವವನ್ನು ಪ್ರತಿವ್ಯಕ್ತಿಯ ವ್ಯಕ್ತಿತ್ವಕ್ಕನುಗುಣವಾಗಿ ತಮ್ಮನ್ನು ತಾವು ಪರಿಚಯಿಸಿಕೊಳ್ಳುತ್ತವೆ.

- ಚಿತ್ರದ ಮೂಲಕವೇ ಸಾವಿರಾರು ವಿಷಯವನ್ನು ಪರಿಚಯಿಸಿಕೊಳ್ಳುತ್ತದೆ.
- ಚಿತ್ರದ ಮೂಲಕವೇ ಕಥೆ, ಕವಿತೆ, ದೃಶ್ಯಗಳನ್ನು ಕಲ್ಪಿಸಿಕೊಳ್ಳುತ್ತದೆ.
- ಚಿತ್ರದ ಮೂಲಕವೇ ಗಣಿತ, ವಿಜ್ಞಾನಗಳ ಪ್ರಯೋಗ, ವಿವರವನ್ನು ಸರಳವಾಗಿ ತಿಳಿಯುತ್ತದೆ.
- ಚಿತ್ರದ ಮೂಲಕವೇ ಕಲ್ಪನೆಯನ್ನು ವೃದ್ಧಿಸಿಕೊಳ್ಳುತ್ತದೆ.
- ಚಿತ್ರದ ಮೂಲಕವೇ ನೆನಪಿನ ಶಕ್ತಿ ಉತ್ತಮಗೊಳ್ಳುವುದಲ್ಲದೆ ಕಲಿಕೆಯ ವೇಗ ಹೆಚ್ಚಾಗುತ್ತದೆ.
- ಚಿತ್ರದಿಂದಲೇ ಸೌಂದರ್ಯಪ್ರಜ್ಞೆ, ಕಲೋಪಾಸನೆ, ಭವ್ಯ ಸಂಸ್ಕೃತಿ ನಿರ್ಮಾಣ.
- ಚಿತ್ರದಿಂದಲೇ ಹೊಸ ಹೊಸ ಆವಿಷ್ಕಾರ, ಹೊಸ ವಿಸ್ಮಯದ ಪರಿಕಲ್ಪನೆ, ಹೊಸ ವಸ್ತುಗಳ ಅನ್ವೇಷಣಾ ಗುಣಗಳು ಹುಟ್ಟುತ್ತವೆ.
- ಚಿತ್ರಕಲೆ ಮಗುವಿನ ಸಂತಸದ ಗುಟ್ಟು ಎಂದರೂ ತಪ್ಪಾಗದು. ಇಂತಹ ಸಂತಸದ ಮನಹೊಂದಿದ ಮಕ್ಕಳು ಸಕ್ರಿಯವಾಗಿ ಆಟ ಪಾಠಗಳಲ್ಲಿ ತೊಡಗಿಕೊಂಡು ಆನಂದವಾಗಿ ಕಲಿಯುತ್ತಾರೆ, ಬೆಳೆಯುತ್ತಾರೆ. ಶಿಕ್ಷಣದಲ್ಲಿ ಉನ್ನತ ಫಲಿತಾಂಶವನ್ನು ಯಶಸ್ವಿಯಾಗಿ ಪಡೆಯಬಲ್ಲರು.

# ಕಲೆ




ಸೃಜನಾತ್ಮಕ ಚಿತ್ರಕಲೆ ನೋಡಿ

* ಅನುಪಯೋಗಿ ವಸ್ತುಗಳಿಂದ ತಯಾರಿಸಿದ ಸೃಜನಾತ್ಮಕ ವಸ್ತುಗಳು

● ಪ್ರಕೃತಿಯ ಕಚ್ಚಾವಸ್ತುಗಳನ್ನು ಎಲೆ, ನಾರು, ಹೂ, ಬೀಜ, ಹುಲ್ಲು, ಬಿದಿರು, ಮರದ ಪದರು ಇತ್ಯಾದಿಗಳಿಂದ ಬಳಸಿ ತಯರಿಸಿದ ವಸ್ತುಗಳು.

○ ಬಣ್ಣದ ಬಟ್ಟೆ ಚೂರು, ನೂಲು, ಪ್ಲಾಸ್ಟಿಕ್ ನಾರು, ಮಿರುಗು ನಕ್ಷತ್ರ, ಹುಡಿ ಮಣಿ, ಬಳೆ ಚೂರುಗಳಿಂದ ತಯಾರಿಸಿದ ವಸ್ತುಗಳು.

# ಚಿತ್ರಕಲಾ ಶಿಕ್ಷಣ

# ART EDUCATION

- ಕಲಾ ಇತಿಹಾಸ ಮತ್ತು ರಸಗ್ರಹಣ
  **History of Art and Art Appreciation**
- ಚಿತ್ರಕಲಾ ರಚನೆ
  **Picture Drawing**
  - ಚಿತ್ರಕಲೆಯ ಮೂಲಭೂತ ಅವಶ್ಯಕಗಳು ಮತ್ತು ಚಿತ್ರಕಲಾ ಶಾಸ್ತ್ರ
    **Fundamentals of Drawing and Theory Drawing**
  - ಪ್ರಾತ್ಯಕ್ಷಿಕೆ
    **Practical**
    - ಹಂತಗಳು **Stages**
      **Steps**
      - ಅನುಕರಣ ಚಿತ್ರ
        **Imitation**
        1. ಅನುಕರಣ ಚಿತ್ರ ಎಂದರೇನು ?
        2. ಅನುಕರಣ ಚಿತ್ರ ಅಭ್ಯಾಸದ ಉದ್ದೇಶಗಳು
        3. ಅನುಕರಣ ಚಿತ್ರಗಳನ್ನು ಹೇಗೆ ಬರೆಯುವುದು.
        4. ಅನುಕರಣ ಚಿತ್ರದಲ್ಲಿ ಅಭ್ಯಾಸ ಭಾಗಗಳು

        ↓ 1
      - ವೀಕ್ಷಣಾ ಚಿತ್ರ
        **Observation**
        1. ವೀಕ್ಷಣಾ ಚಿತ್ರ ಎಂದರೇನು ?
        2. ವೀಕ್ಷಣಾ ಚಿತ್ರ ಅಭ್ಯಾಸದ ಉದ್ದೇಶಗಳು
        3. ವೀಕ್ಷಣಾ ಚಿತ್ರಗಳನ್ನು ಹೇಗೆ ಬರೆಯುವುದು
           ವೀಕ್ಷಣಾ ಚಿತ್ರಗಳಲ್ಲಿ ವಿಧಗಳು
        4. ವೀಕ್ಷಣಾ ಚಿತ್ರಗಳಲ್ಲಿ ಅಭ್ಯಾಸ ಭಾಗಗಳು

        ↓ 2
      - ಚಿಂತನ ಚಿತ್ರ
        **Imagination**
        1. ಚಿಂತನ ಚಿತ್ರ ಎಂದರೇನು ?
        2. ಚಿಂತನ ಚಿತ್ರಗಳ ಅಭ್ಯಾಸದ ಉದ್ದೇಶಗಳು
        3. ಚಿಂತನ ಚಿತ್ರಗಳನ್ನುಹೇಗೆ ಬರೆಯುವುದು
        4. ಚಿಂತನ ಚಿತ್ರಗಳಲ್ಲಿ ಮುಖ್ಯ ಭಾಗಗಳು

        ↓ 3
    - ಮಾಧ್ಯಮಗಳು
      **Mediums**
      - ರೇಖೆಗಳು
        **Lines**
      - ಛಾಯಾಗ್ರಹಣ
        **Shades**
      - ವರ್ಣಗಳು
        **Colour**
      - ಅನುಪಯೋಗಿ ವಸ್ತುಗಳು
        **Wastes-Scraps**

ಮುಂದುವರಿಯುವುದು

ಕೃತಿ ರಚನೆಯೆಂದರೆ ಒಂದು ಕಿರು ಪ್ರಪಂಚ ಸೃಷ್ಟಿ. - ಕ್ಯಾಂಡಿನಸ್ಕಿ

### 1

1. ವಿವಿಧ ವಿನ್ಯಾಸಗಳನ್ನು ನೋಡಿ ಬರೆಯುವುದು.
2. ಹೂಗಳ ಚಿತ್ರಗಳು
3. ಪ್ರಾಣಿ ಪಕ್ಷಿಗಳ ಅಂಗಗಳ ಚಿತ್ರಗಳು
4. ಪ್ರಾಣಿ ಪಕ್ಷಿಗಳ ಚಿತ್ರಗಳು
5. ಮನುಷ್ಯ ಶರೀರದ ಭಾಗಗಳ ಚಿತ್ರಗಳು
6. ಮರಗಿಡಗಳ ಚಿತ್ರಗಳು
7. ಕ್ರಿಮಿಕೀಟಗಳ ಮಿಡಿತೆಗಳ ಚಿತ್ರಗಳು
8. ಜೀವಶಾಸ್ತ್ರದ ನಕ್ಷೆಗಳು
9. ಭೌತಶಾಸ್ತ್ರದ ನಕ್ಷೆಗಳು
10. ಸಮಾಜ ಪಾಠಗಳ ನಕ್ಷೆಗಳು
11. ಭೂಮಿತಿಯ ಆಕಾರಗಳು
12. ಅಕ್ಷರಗಳನ್ನು ನೋಡಿ ಬರೆಯುವುದು.
13. ಇತರ ಯಾವುದೇ ಚಿತ್ರಗಳು

### 2

ನೈಸರ್ಗಿಕ ವಸ್ತುಗಳು

**Objects from Nature**

1. ಎಲೆಗಳು
2. ಹೂಗಳು
3. ಪ್ರಾಣಿಗಳು
4. ಪಕ್ಷಿಗಳು
5. ಶರೀರದ ಭಾಗಗಳು
6. ಕ್ರಿಮಿಕೀಟಗಳು
7. ಮಿಡಿತೆಗಳು
8. ಮರಗಿಡಗಳು
9. ನದಿ, ತೊರೆ
10. ಬೆಟ್ಟ, ಗುಡ್ಡ, ಮೋಡ
11. ಜೀವಶಾಸ್ತ್ರ ಪಾಠದ ನಿಜ ವಸ್ತುಗಳನ್ನುನೋಡಿ ಬರೆಯುವುದು.

ನಿತ್ಯೋಪಯೋಗಿ ವಸ್ತುಗಳು

**Objects from daily use**

1. ವಿವಿಧ ಬಹು ಭುಜ ಘನಾಕೃತಿ
2. ಘನಮೂಲ ವಸ್ತುಗಳು
3. ಸ್ತಂಭಮೂಲ ವಸ್ತುಗಳು
4. ಶಂಕು ಆಕೃತಿಮೂಲ ವಸ್ತುಗಳು
5. ಗೋಳಾಕೃತಿಮೂಲ ವಸ್ತುಗಳು
6. ಇತರ ಘನಾಕೃತಿಮೂಲ ವಸ್ತುಗಳು
7. ಕಛೇರಿ ವಸ್ತುಗಳು
8. ವಿವಿಧ ವಸ್ತುಗಳು
9. ಕ್ರೀಡಾ ಸಾಮಗ್ರಿಗಳು
10. ಮರಮಟ್ಟಿನ ವಸ್ತುಗಳು
11. ಕೃಷಿ ಉಪಕರಣಗಳು
12. ವಾಹನಗಳು
13. ಭೌತಶಾಸ್ತ್ರ ಪಾಠದ ಪ್ರಯೋಗ ಶಾಲಾ ವಿವಿಧ ವಸ್ತುಗಳು

### 3

ಅಲಂಕಾರಿಕ ವಿನ್ಯಾಸ (ನಕ್ಷೆ) ರಚನೆ ಮತ್ತು ವಸ್ತುಗಳಿಗೆ ಜೋಡಣೆ

**Decorative Design Drawing and Application**

ನಕ್ಷೆಯ ಮೂಲ ಆಕಾರಗಳು

**Basic Forms of Design**

1. ಭೂಮಿತಿಯ ಆಕಾರಗಳು
2. ನೈಸರ್ಗಿಕ ಆಕಾರಗಳು
3. ಅಲಂಕಾರಿಕ ಆಕಾರಗಳು
4. ಅಮೂರ್ತ ಆಕಾರಗಳು

ನಕ್ಷೆಯ (ವಿನ್ಯಾಸ) ನಿಯಮಗಳು

**Principles of Design**

1. ಪುನರಾವರ್ತನೆ **Repetive**
2. ಅದಲು ಬದಲು **Alternation**
3. ಸಮ ಆಕಾರ **Symmetry**
4. ಸಮ (ಭಾರ) ತೋಲ **Balance**
5. ಕಿರಣ ವಿಸ್ತಾರ **Radiation**
6. ಚಾಲನೆ **Movement**

ನಕ್ಷೆಯಲ್ಲಿ ವಿಧಗಳು

**Types of Designs**

1. ಅಂಚು
2. ಸಂಪೂರ್ಣ ವ್ಯಾಪಕ
3. ವಿಶಿಷ್ಟ ಸ್ಥಳ ವ್ಯಾಪಕ (ಕೇಂದ್ರ) ಮೂಲೆ, ಎಡಬಲ ಮೇಲ್ಭಾಗ ತಳ

ಸ್ಮರಣ ಚಿತ್ರ

**Memory Drawing**

1. ನೋಡಿದ ಚಿತ್ರಗಳನ್ನು ಸ್ಮರಿಸಿಕೊಂಡು ಚಿತ್ರಿಸುವುದು.
2. ನೋಡಿದ ವಸ್ತುಗಳನ್ನು ಸ್ಮರಿಸಿಕೊಂಡು ಬರೆಯುವುದು.
3. ಪ್ರಕೃತಿಯ ಸಮಾಜದಲ್ಲಿನ ಘಟನೆ, ದೃಶ್ಯಗಳನ್ನು ಸ್ಮರಿಸಿಕೊಂಡು ಚಿತ್ರಿಸುವುದು.
4. ಕಥಾ ಚಿತ್ರಗಳನ್ನು ಬರೆಯುವುದು.

ಭೂಮಿತಿ ಮತ್ತು ಅಕ್ಷರ ಲೇಖನ

**Geometry and Lettering**

1. ಸಮತಲ ರೇಖಾಗಣಿತ ಭೂಮಿತಿ
2. ಘನ ಭೂಮಿತಿ **Plan/Solid Geometry**
3. ಯಥಾ ಮಾನದರ್ಶನ ಚಿತ್ರ **Isometric Geometery**
4. ಕನ್ನಡ ಆಂಗ್ಲ ಭಾಷಾ ಅಕ್ಷರಗಳು

# ಪೂರ್ವ ಮಾಹಿತಿ

ಇಲ್ಲಿ ಕೊಟ್ಟಿರುವ ಸಲಹೆಗಳನ್ನು ಶಿಕ್ಷಕರು ಮನನ ಮಾಡಿಕೊಂಡು, ಪಾಠಗಳ ಬಗ್ಗೆ ಯೋಚನೆ ನಡೆಸಬೇಕು. ಈ ಹಂತದಲ್ಲಿ ಮಕ್ಕಳ ವಯೋಮಿತಿಗನುಗುಣವಾಗಿ ಅವರ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಆ ಸಾಮರ್ಥ್ಯಕ್ಕನುಗುಣವಾಗಿ ಕಲಿತ ಚಟುವಟಿಕೆಯು ಪರಸ್ಪರ ಹೊಂದಿಕೊಂಡಿರಬೇಕು. ಚಟುವಟಿಕೆಗಳನ್ನು ಸಮರ್ಥವಾಗಿ ನಡೆಸುವುದೇ ಆಗಿದೆ. ಪ್ರತಿಯೊಬ್ಬರ ಸಾಮರ್ಥ್ಯದ ಬಗ್ಗೆಯೂ ಶಿಕ್ಷಕನು ಯೋಚಿಸಿ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಕಲಿಸುವ ವಿಧಾನಗಳನ್ನು ಬದಲಾಯಿಸಿಕೊಳ್ಳಬಹುದು. ಸೃಜನಾತ್ಮಕ ಚಿಂತನೆಯ ಮೂಲಕ ತನ್ನದೇ ಆದ ರೀತಿಯಲ್ಲಿ ಕಲೆಯನ್ನು ಅಭಿವ್ಯಕ್ತಗೊಳಿಸಲು ತೊಡಗಿಕೊಳ್ಳುವಂತಹ ಗುಣಗಳನ್ನು ಮಕ್ಕಳು ಬೆಳೆಸಿಕೊಳ್ಳಲು ಶಿಕ್ಷಕನು ನೆರವಾಗಬೇಕು. ವಿದ್ಯಾರ್ಥಿಗಳು ಅಭಿವ್ಯಕ್ತಿ ಗೊಳಿಸಿದ ಕೃತಿಗಳಲ್ಲಿ ಮಾಡಿರುವ ನ್ಯೂನತೆಗಳನ್ನು ವಿಶ್ಲೇಷಿಸಿ ಪರಿಹಾರ ರೂಪವಾಗಿ ಬೋಧನೆಯಲ್ಲಿಯ ನ್ಯೂನತೆಗಳನ್ನು ಸರಿ ಪಡಿಸಬೇಕು. ಪಾಠ ಮಾಡಬೇಕಾದ ಘಟಕ ವಸ್ತುವನ್ನು ಈ ಕೆಳಕಂಡ ಆಧಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಪಾಠ ಯೋಜನೆಯ ನಂತರ ಬೋಧಿಸುವುದು ಬಹಳ ಸೂಕ್ತವೆನಿಸುವುದು.

1. ವಸ್ತುಗಳ ಬೆಳವಣಿಗೆಯ ಘಟಗಳನ್ನು ಅನುಸರಿಸಿ ಗ್ರಹಿಕೆಗೋಸ್ಕರ ವಸ್ತುವನ್ನು ಉಪ ಘಟಕಗಳನ್ನಾಗಿ ವಿಶ್ಲೇಷಿಸುವುದು.
2. ಘಟಕದ ಅಧ್ಯಯನದಿಂದ ಹೊರಹೊಮ್ಮುವ ಮೌಲ್ಯಗಳನ್ನು ಸ್ಪಷ್ಟೀಕರಿಸುವುದು.
3. ಅಭಿವ್ಯಕ್ತ ಕೌಶಲ್ಯಗಳನ್ನು ನಿರ್ಧರಿಸುವುದು.
4. ಮೆಚ್ಚಿ ಸ್ವೀಕರಿಸಬೇಕಾದ ಅಂಶಗಳನ್ನು ಗಮನಿಸಿ ಗುರುತಿಸುವುದು.
5. ಸ್ಥೂಲವಾದ ಬೋಧನಾ ಉದ್ದಿಷ್ಟಗಳಾದ ಜ್ಞಾನಗ್ರಹಿಕೆ, ಅನ್ವಯ, ಕೌಶಲ್ಯ, ಆಸಕ್ತಿ, ಪ್ರಶಂಸೆ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ಮಾಡಿದ ಬೋಧನೆ ಪರಿಣಾಮಕಾರಿಯಾಗಿರುತ್ತದೆ.
6. ಶಿಕ್ಷಕರು ಇರಿಸಿಕೊಂಡ ಬೋಧನಾ ಗುರಿಗಳನ್ನು ಸಾಧಿಸಲು ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಸಲಕರಣೆಗಳು ಸೂಕ್ತ ಬೋಧನಾಕ್ರಮ ಇವುಗಳನ್ನು ತಾಂತ್ರಿಕವಾಗಿ ಯೋಚಿಸಿಕೊಳ್ಳುವಿಕೆಗಳೂ ಕೂಡ ಅಷ್ಟೇ ಮುಖ್ಯವಾದ ಅಂಶಗಳಾಗಿವೆ.

★ ಶಿಕ್ಷಕರು ಚಟುವಟಿಕೆಗಳನ್ನು ಮೌಲ್ಯ ಮಾಪನ ಮಾಡುವಾಗ ಟೀಕೆ ಮಾಡಬಾರದು. ತಾನೇ ಸುಧಾರಿಸಕೊಳ್ಳಲು ಅವಕಾಶ ಕೊಡಬೇಕು. ವಿದ್ಯಾರ್ಥಿಗಳ ಸ್ವಂತಿಕೆ, ಪೂರ್ಣತೆ, ಸ್ವಾತಂತ್ರ್ಯಕ್ಕೆ ಬೆಲೆ ಕೊಡಬೇಕು. ಅವರ ಅಭಿವ್ಯಕ್ತಿ ಶಿಕ್ಷಕರಿಗೆ ಒಪ್ಪಿತವಾಗದಿರಬಹುದು. ಆದರೆ, ಅದಕ್ಕೆ ಬೆಲೆ ಕೊಡುವುದನ್ನು ಮರೆಯಬಾರದು. ಅವರು ಮಾಡಿರುವ ವಿವಿಧ ನ್ಯೂನತೆಗಳು ಚರ್ಚೆಯಿಂದ, ಮೆಚ್ಚುಗೆಯ ಮಾತುಗಳಿಂದ, ಪ್ರದರ್ಶನದಿಂದ ಚಿತ್ರಕಲಾ ಪಾಠ ಪರಿಪೂರ್ಣವೂ ಹಾಗೂ ಯಶಸ್ವಿಯೂ ಆಗುವುದು.

## ಕಲಿಕಾ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳು

- ಚಿತ್ರಕಲೆಗೂ ಪಠ್ಯ ವಿಷಯಗಳಿಗೂ ಇರುವ ಸಂಬಂಧ ಬಗ್ಗೆ ತಿಳುವಳಿಕೆ
- ಕುತೂಹಲ, ಅಚ್ಚರಿ ಮೂಡಿಸುವಂತೆ ಚಿತ್ರರಚನಾ ಕೌಶಲ್ಯ ಬಳಕೆ ಮತ್ತು ಚಿತ್ರಕಲಾ ಪ್ರದರ್ಶನ.
- ಹತ್ತಿರದ ಕಲಾ ಶಾಲೆ, ಇತಿಹಾಸ ಸ್ಥಳ, ಚಿತ್ರ ಪ್ರದರ್ಶನಾಲಯ, ಸಾಂಸ್ಕೃತಿಕ ಹಿನ್ನೆಲೆ ಕೇಂದ್ರಗಳು, ಪರಿಸರ ವೀಕ್ಷಣಾ ಸ್ಥಳಗಳಿಗೆ ಬೇಟಿ ನೀಡುವುದು.
- ಮಕ್ಕಳಲ್ಲಿ ಅಪೇಕ್ಷಿತ ಮೌಲ್ಯಗಳನ್ನು ಬೆಳೆಸುವುದು.
- ಸ್ಥಳೀಯ ವಿಷಯ ತಜ್ಞರಿಂದ ಮಕ್ಕಳಿಗೆ ಮಾರ್ಗದರ್ಶನ.
- ಮಕ್ಕಳೊಂದಿಗೆ ಚರ್ಚೆಯೊಂದಿಗೆ ಆಸಕ್ತಿ ಮೂಡಿಸುವುದು.
- ಚಿತ್ರಗಳಿಗೆ ಪೂರಕ ಕಥೆ ಪೋಣಿಸುವುದು, ಕಥೆಗಳಿಗೆ ಚಿತ್ರ ರಚನೆಯ ಸರಣಿಗೆ ಪ್ರೋತ್ಸಾಹಿಸುವುದು.
- 87% ಚಿತ್ರಕಲೆಗೆ ಬೇಕಾದ ಕಲಿಕಾ ಜ್ಞಾನ ನೋಡುವುದರ ಮೂಲಕ ಲಭ್ಯವಾಗುತ್ತದೆ.
- 13% ಇನ್ನಿತರ ಕಲ್ಪನೆಗಳು, ಅಭಿವ್ಯಕ್ತಿಗಳು, ಜ್ಞಾನೇಂದ್ರಿಯ ಮತ್ತು ಗ್ರಾಹಣೇಂದ್ರಿಯ ಮೂಲಕ ಲಭ್ಯವಾಗುತ್ತದೆ.
- ಕಲಿಕಾ ಸಂದರ್ಭದಲ್ಲಿ ಸಾಮಾನ್ಯವಾಗಿ ಆಗಬಹುದಾದ ತಾಂತ್ರಿಕ, ರಚನಾ ಕ್ರಮವು ಸಾಮೂಹಿಕ ತಪ್ಪುಗಳಾದಲ್ಲಿ ಶಿಕ್ಷಕರು ಕರಿ ಹಲಗೆಯ ಮೇಲೆ, ಸುಲಭ ವಿಧಾನದಿಂದ ರಚಿಸಿ ತಿಳಿಸುವುದು ಉತ್ತಮ ಮಾರ್ಗ.

## ಚಿತ್ರಕಲೆಯ ಗುರಿಗಳು

1. ಚಿಂತನೆಗೆ ಮುಕ್ತ ಅವಕಾಶ.
2. ಸೃಜನಾತ್ಮಕ ಅಭಿವ್ಯಕ್ತಿಗೆ ಅವಕಾಶ.
3. ವೀಕ್ಷಣಾ ಶಕ್ತಿ ಬೆಳೆಸುವುದು.
4. ತನ್ನ ಸುತ್ತಲಿನ ವೈವಿಧ್ಯಮಯ ಬದುಕಿನ ಗ್ರಹಿಕೆ.
5. ಆಲೋಚನಾ, ವಿವೇಚನಾ ಸಾಮರ್ಥ್ಯ ವೃದ್ಧಿಸುವುದು.
6. ಕ್ರಿಯಾಶೀಲತೆ ಗುಣಗಳನ್ನು ಪ್ರೋತ್ಸಾಹಿಸುವುದು.
7. ಹಸ್ತಕೌಶಲ್ಯ ರೂಡಿಸಿಕೊಳ್ಳುವುದು.
8. ಇತರರ ಚಿತ್ರಗಳನ್ನು ಮೆಚ್ಚುವ ಗುಣ ಬೆಳೆಯುವುದು, ಸಂರಕ್ಷಿಸುವುದು.
9. ಬೌದ್ಧಿಕ ಬೆಳವಣಿಗೆಗೆ ಅವಕಾಶ.
10. ಸೌಂದರ್ಯ ಪ್ರಜ್ಞೆಯ ಅರಿವು ಮೂಡಿಸುವುದು.
11. ಕಲೆಯ ಮೂಲ ಜ್ಞಾನ ಹಾಗೂ ಪ್ರಗತಿ ಬೆಳವಣಿಗೆ, ಇತಿಹಾಸ, ಪರಂಪರೆಯ ಬಗ್ಗೆ ಅರಿವು.
12. ಸ್ಮರಣೆಗೆ ಚಿತ್ರಕಲೆ ಶಕ್ತಿವರ್ಧಕವಾಗಿ ಕೆಲಸ ಮಾಡುವುದು.
13. ತಾಳ್ಮೆ, ಏಕಾಗ್ರತೆ, ಚಿಂತನಾಶೀಲ ಪ್ರವೃತ್ತಿ, ಭಾವನಾತ್ಮಕ ಪ್ರಪಂಚದ ಮಧುರ ಅನುಭವ.
14. ಅಭಿವ್ಯಕ್ತತೆ ಹಾಗೂ ಅಮೂರ್ತತೆಯಲ್ಲಿ ರಚಿಸುವ ತೋರ್‌ಪಡಿಸುವ ಜಾಣ್ಮೆ.
15. ಕಲ್ಪನೆಯ ವೃದ್ಧಿ ಹಾಗೂ ಕಾರ್ಯರೂಪ ಗೊಳಿಸುವ ಛಲ, ಆತ್ಮಸ್ಥೈರ್ಯ ಹೆಚ್ಚಿಸುವುದು.